ಅಧ್ಯಕ್ಷರು.—ಇದರ ಮೇಲೆ ಚರ್ಚೆ ಮುಗಿದಿದೆ. ಈಗ ರಾಜೂಗೌಡರು ತಮ್ಮ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಹುದು.

ಶ್ರೀ ವಾಟಾಳ್ ನಾಗರಾಜ್.—ಮತ್ತೊಂದು ಗಮನ ಸೆಳೆಯುವ ಸೂಚನೆಯನ್ನು ನಾನು ಕಳಿಸಿದ್ದೆ. ಬೆಳಗಾಂ ನಗರದ ಚುನಾವಣೆಗಳನ್ನು ಮುಂದಕ್ಕೆ ಹಾಕಿರುವ ಬಗ್ಗೆ...

MR. SPEAKER.—I will not allow any body to seek clarification Sri Raju Gowda. you may call the attention of the concerned Minister...

೧೨-೦೦ ಪಿ.ಎಂ.

ಗಮನ ಸೆಳೆಯುವ ಸೂಚನೆ

೧೯೯೦-೯೧ರ ಶೈಕ್ಷಣಿಕ ವರ್ಷದಲ್ಲಿ ಆಗಸ್ಟ್ ಮಧ್ಯದವರೆಗೆ ಮಕ್ಕಳಿಗೆ ಪಠ್ಯಪುಸ್ತಕಗಳು ಲಭ್ಯವಾಗುವ ಸಾಧ್ಯತೆಗಳು ಇಲ್ಲದಿರುವುದರ ಬಗ್ಗೆ

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೆ. ೧೯೯೦-೯೧ರ ಶೈಕ್ಷಣಿಕ ವರ್ಷದಲ್ಲಿ ಆಗಸ್ಟ್ ಮಧ್ಯದ ವರೆಗೆ ಮಕ್ಕಳಿಗೆ ಪಠ್ಯಪುಸ್ತಕಗಳು ಲಭ್ಯವಾಗುವ ಸಾಧ್ಯತೆಗಳು ಇಲ್ಲದಿರುವುದರ ಬಗ್ಗೆ ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಖಾತೆಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

೧೯೯೦-೯೧ನೇ ಸಾಲಿನಲ್ಲಿ ೩, ೫ ಮತ್ತು ೮ನೇ ತರಗತಿಗಳಿಗೆ ಕಾರ್ಯಕ್ರಮದಂತೆ ನೂತನವಾಗಿ ರಚಿಸಿರುವ ಪಠ್ಯ ವಸ್ತುವನ್ನು ಆಧರಿಸಿ ಪಠ್ಯ ಪುಸ್ತಕಗಳನ್ನು ಜಾರಿಗೆ ತರಲಾಗಿರುವುದು. ಇದರಂತೆ ೨೭೬ ಶೀರ್ಷಿಕೆಗಳ ಪಠ್ಯ ಪುಸ್ತಕಗಳ ಹಸ್ತ ಪ್ರತಿಗಳನ್ನು ತಯಾರಿಸಿ ಮುದ್ರಣಕ್ಕೆ ಕಳುಹಿಸಲಾಗಿದ್ದ, ಈಗಾಗಲೇ ಪುಸ್ತಕಗಳ ಮುದ್ರಣ ಹಂತದಲ್ಲಿದ್ದು ಕರಡು ಓದುವಿಕೆಯು ಮುಂದುವರೆಯುತ್ತಿದೆ. ಮುದ್ರಿತ ಪುಸ್ತಕಗಳನ್ನು ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಒದಗಿಸುವ ಪ್ರಯತ್ನ ನಡೆದಿದೆ. ಇದರೊಂದಿಗೆ ೧,೩,೪,೬,೯ ಮತ್ತು ೧೦ನೇ ತರಗತಿಗಳ ಪಠ್ಯ ಪುಸ್ತಕಗಳು ಪುನರ್ ಮುದ್ರಣ ಕಾರ್ಯವು ಸಾಗುತ್ತಿದೆ.

ಪಠ್ಯ ಪುಸ್ತಕಗಳ ಮುದ್ರಣಕ್ಕಾಗಿ ಮೆ: ಹಿಂದುಸ್ಥಾನ್ ಪೇಪರ್ ಕಾರ್ಪೊರೇಷನ್ ಸಂಸ್ಥೆಯ ಪತಿಯಿಂದ ೩೫೦೦ ಮೆಟ್ರಿಕ್ ಟನ್ ಮುದ್ರಣದ ಬಿಳಿ ಕಾಗದ ಸರಬರಾಜಾಗ ಬೇಕಾಗಿದೆ. ಇದಕ್ಕಾಗಿ ಶೇ ೨೫ ರಷ್ಟು ಮುಂಗಡ ಹಣ ಸಹ ಪಾವತಿ ಮಾಡಲಾಗಿದೆ.

ಸರಕಾರವು ಈ ದಿಸೆಯಲ್ಲಿ ಬಾಕಿ ಇರುವ ಮುದ್ರಣ ಕಾಗದವನ್ನು ತ್ವರಿತವಾಗಿ ಸರಬರಾಜು ಮಾಡಲು ಭಾರತ ಸರಕಾರ ಮೆ. ಹಿಂದೂಸ್ಥಾನ್ ಪೇಪರ್ ಕಾರ್ಪೊರೇಷನ್ ಸಂಸ್ಥೆಯೊಂದಿಗೆ ವ್ಯವರಿಸಿ ತಕ್ಷಣ ಸರಬರಾಜು ಮಾಡಲು ಟೆಲೆಕ್ಸ್ ಮೂಲಕ ಪ್ರಯತ್ನಿಸಲಾಗಿದೆ. ದಿನಾಂಕ ೧೦-೧೧-೧೯೯೦ರಂದು ನವದೆಹಲಿಯಲ್ಲಿ ನಡೆಯಲಾದ ಪೇಪರ್ ಕಮಿಟಿ ಮೀಟಿಂಗ್‌ನಲ್ಲಿ ಭಾಗವಹಿಸಿದ್ದ ಮುದ್ರಣ, ಲೇಖನ ಸಾಮಾಗ್ರಿ ಮತ್ತು ಪ್ರಕಟಣಾ ಇಲಾಖಾ ನಿರ್ದೇಶಕರು ಭಾರತ ಸರ್ಕಾರದ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಬಾಕಿ ಉಳಿದ ಬ್ಯಾಕ್‌ಲಾಗ್ ಮುದ್ರಣ ಕಾಗದವನ್ನು ಸರಬರಾಜು ಮಾಡಲು ವಿನಂತಿಸಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತರು ಭಾರತ ಸರಕಾರದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಬಾಕಿ ಇರುವ ಮುದ್ರಣ ಕಾಗದವನ್ನು ಸರಬರಾಜು ಮಾಡಲು ಕ್ರಮ ಕೈಗೊಂಡಿದ್ದಾರೆ.

೧೯೯೧ರ ಮಾರ್ಚ್ ತಿಂಗಳ ೭ನೇ ತಾರೀಖಿನಂದು ಭಾರತ ಸರ್ಕಾರವು ಟೆಲೆಕ್ಸ್ ರವಾನಿಗೆ ಬಾಕಿ ಉಳಿದ ಬ್ಯಾಕ್‌ಲಾಗ್ ಮುದ್ರಣ ಕಾಗದವನ್ನು ಹಂತಹಂತವಾಗಿ ಪೂರೈಸುವುದಾಗಿ ತಿಳಿಸಿದೆ. ಬಾಕಿ ಉಳಿದ ಮುದ್ರಣ ಕಾಗದವನ್ನು ಸರಬರಾಜು ಮಾಡಲು ಭಾರತ ಸರಕಾರ ಮೆ: ಹಿಂದೂಸ್ಥಾನ್ ಪೇಪರ್ ಕಾರ್ಪೊರೇಷನ್ ಸಂಸ್ಥೆಯೊಂದಿಗೆ ಸಮಾಲೋಚಿಸಲು ಪತ್ರ ವ್ಯವಹಾರ ಮಾಡಲಾಗುತ್ತಿದೆ.

ಈ ಮಧ್ಯೆ ಪಠ್ಯ ಪುಸ್ತಕಗಳ ಮುದ್ರಣಕ್ಕೆ ಕೊರತೆಯಾಗದಂತೆ ಮೆ: ಹಿಂದೂಸ್ಥಾನ್ ಪೇಪರ್ ಕಾರ್ಪೊರೇಷನ್ ಸಂಸ್ಥೆಯಿಂದ ಮುದ್ರಣದ ಬಿಳಿ ಕಾಗದ ಬರುವವರೆಗೆ ಪಠ್ಯ ಪುಸ್ತಕಗಳ ಮುದ್ರಣಕ್ಕೆ

ಸುಮಾರು ೫೦೦ ಎಂ.ಟಿ. ಕಾಗದವನ್ನು ಮುಕ್ತಮಾರುಕಟ್ಟೆಯಲ್ಲಿ ಖರೀದಿಸುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಒಟ್ಟಾರೆ, ಶೈಕ್ಷಣಿಕ ವರ್ಷದ ಪ್ರಾರಂಭದ ಹಂತದಲ್ಲಿ ಪಠ್ಯ ಪುಸ್ತಕಗಳ ಮುದ್ರಣ ಸರಬರಾಜಿನ ಬಗ್ಗೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಜೆ. ರಾಜಾಗೌಡ (ಹನೂರು).—ಮಾನ್ಯ ಅಧ್ಯಕ್ಷರೆ, ಪ್ರತಿವರ್ಷ ಮುದ್ರಣಕ್ಕಾಗಿ ಸುಮಾರು ೫೦೦೦ ಮೆಟ್ರಿಕ್ ಟನ್ ಕಾಗದ ಬೇಕು ಎನ್ನತಕ್ಕಂಥಾದ್ದು ತಮಗೆ ಗೊತ್ತಿದೆ. ಈ ೫೦೦೦ ಮೆಟ್ರಿಕ್ ಟನ್ ಕಾಗದವನ್ನು ಯಾವ ಯಾವ ಮೂಲಗಳಿಂದ ಸರಬರಾಜು ಮಾಡಿಕೊಳ್ಳುತ್ತೀರಿ ಎನ್ನುವುದು ನನ್ನ ಮೊದಲ ಪ್ರಶ್ನೆ. ಈಗ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಮೈ: ಹಿಂದೂಸ್ಥಾನ್ ಪೇಪರ್ ಕಾರ್ಪೊರೇಷನ್ ಸಂಸ್ಥೆಯು ವತಿಯಿಂದ ಕೇವಲ ೩೫೮೦ ಮೆಟ್ರಿಕ್‌ಟನ್ ಕಾಗದ ಸರಬರಾಜು ಆಗುತ್ತಾ ಇದೆ ಎಂದು ಹೇಳಿದ್ದಾರೆ. ಆದರೆ ಇನ್ನೂ ಸರಬರಾಜು ಆಗಿಲ್ಲ. ಈಗ ನಾವು ಏಪ್ರಿಲ್ ತಿಂಗಳ ಮೊದಲ ಭಾಗದಲ್ಲಿದ್ದೇವೆ. ಜೂನ್ ತಿಂಗಳಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತದೆ. ಇನ್ನು ಒಂದು ತಿಂಗಳಲ್ಲಿ ಮುದ್ರಣ ಕಾರ್ಯವನ್ನು ಪೂರೈಸಿ ಪುಸ್ತಕಗಳನ್ನು ಸರಬರಾಜು ಮಾಡುವುದ ಕ್ಕಾಗುತ್ತದೆಯೇ ? ಎರಡನೆಯದು ವಿದ್ಯುತ್ ಕೊರತೆ ರಾಜ್ಯದಲ್ಲಿ ಬಹಳ ಜಾಸ್ತಿ ಇದೆ. ಇವೊತ್ತಿ ಕೇಂದ್ರ ಸರ್ಕಾರದಿಂದ ರಿಯಾಯಿತಿ ದರದಲ್ಲಿ ಪೇಪರ್ ಸರಬರಾಜಾಗಿಲ್ಲ. ಪಠ್ಯಪುಸ್ತಕಗಳ ನಿರ್ದೇಶನಾಲಯ ದಿಂದ ಪಠ್ಯಪುಸ್ತಕಗಳ ಹಸ್ತ ಪ್ರತಿಗಳು ಸರ್ಕಾರದ ಮುದ್ರಣಾಲಯಕ್ಕೆ ತಲುಪಿಲ್ಲ. ಹೀಗಿರುವಾಗ ಅಷ್ಟು ಬೇಗನೆ ಪಠ್ಯಪುಸ್ತಕಗಳನ್ನು ಪ್ರಿಂಟ್‌ಮಾಡಿ ಸಕಾಲದಲ್ಲಿ ಸರಬರಾಜು ಮಾಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಈ ೫೦೦೦ ಮೆಟ್ರಿಕ್‌ಟನ್ ಪೇಪರ್ ಯಾವ ಯಾವ ಏಜೆನ್ಸಿಯಿಂದ ಪೂರೈಕೆಯಾಗುತ್ತದೆ ಎನ್ನುವುದನ್ನು ತಿಳಿಸಬೇಕು. ಮತ್ತೆ ಈ ಲೇಖಿಕ್ ಪುಸ್ತಕಗಳನ್ನು ತಯಾರು ಮಾಡುವಂಥ ಎಂ.ಎಸ್.ಐ.ಎಲ್. ನವರು ಕಾಗದ ಇಲ್ಲ ಎಂದು ಕೈಕಟ್ಟಿ ಕೊಂಡು ಕುಳಿತಿದ್ದಾರೆ. ಲೇಖಿಕ್ ಪುಸ್ತಕಗಳನ್ನು ಮಾಡಿ ರಿಯಾಯಿತಿ ದರದಲ್ಲಿ ಕೊಡಬೇಕು, ಆ ಕಾರ್ಯವನ್ನು ಅವರು ನಿರ್ವಹಿಸುತ್ತಿಲ್ಲ. ಸಕಾಲದಲ್ಲಿ ಲೇಖಿಕ್ ಪುಸ್ತಕಗಳು ಮತ್ತು ಪಠ್ಯಪುಸ್ತಕಗಳನ್ನು ಕೊಡುವುದಕ್ಕೆ ಆಗುತ್ತದೆಯೇ. ವಿದ್ಯುತ್ ಕೊರತೆಯಿಂದ ಸಕಾಲದಲ್ಲಿ ಈ ಪುಸ್ತಕಗಳನ್ನು ಸರಬರಾಜು ಮಾಡಲು ಪುವುದಕ್ಕೆ ತಮಗೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದಕ್ಕೆ ಸಮಂಜಸವಾದ ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ —ಮಾನ್ಯ ಅಧ್ಯಕ್ಷರೇ, ಇದರಲ್ಲಿ ತೊಂದರೆ ಇದೆ. ತಮಗೆ ತಿಳಿದ ಹಾಗೆ ಹಿಂದೂಸ್ಥಾನ್ ಪೇಪರ್ ಮಿಲ್ಸ್‌ನವರು ಸಬ್ಸಿಡೈಸ್ಡ್ ರೇಟ್‌ನಲ್ಲಿ ಕಾಗದವನ್ನು ಕೊಡುತ್ತಿದ್ದಾರೆ. ಆದ್ದರಿಂದ ನಾವು ಅವರನ್ನು ಅವಲಂಬಿಸಬೇಕಾಗಿದೆ. ಇಲ್ಲದಿದ್ದರೆ ಮಾರ್ಕೆಟ್ಟಿನಲ್ಲಿ ಕೊಂಡು ಕೊಳ್ಳುವುದಾದರೆ ಯಾವುದೇ ಕಷ್ಟ ಬರುವುದಿಲ್ಲ. ಆದರೆ ೧೦೦ಕ್ಕೆ ೧೦೦ರಷ್ಟು ಸಬ್ಸಿಡೈಸ್ ಆಗುವುದರಿಂದ ನಾವು ಅವರನ್ನು ಅವಲಂಬಿಸಿದ್ದೇವೆ. ಅವರು ಕಳುಹಿಸುವುದನ್ನು ಸಾಕಷ್ಟು ತಡಮಾಡ್ತಾರೆ. ಅದು ವಾಸ್ತವಾಂಶ. ಮಾನ್ಯ ಸದಸ್ಯರ ಆತಂಕ ಏನು ಇದೆ, ಅದು ಆಗುವುದಿಲ್ಲ, ಸಪ್ಲೈ ಮಾಡುವುದಕ್ಕೆ ಆಗುವುದಿಲ್ಲ – ಅದಕ್ಕೆ ಆಧಾರವಿಲ್ಲ. ಮುಂದಿನ ವರ್ಷದಲ್ಲಿ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅದಷ್ಟೂ ಒದಗಿಸಲು ನಾವು ಪ್ರಯತ್ನ ಮಾಡುತ್ತೇವೆ.

2. ಸಿ ಮತ್ತು ಡಿ ಭೂಮಿ ಮರುಸರ್ವೆ ಕೆಲಸ ಪ್ರಾರಂಭ ಮಾಡದಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರಿ ಆದೇಶ ನಂ. ಆರ್‌ಡಿ ೧೦೬ ಎಲ್‌ಜಿಪಿ, ೮೮ ದಿನಾಂಕ. ೬-೧೮-೧೯೮೮ರ ಪ್ರಕಾರ ಸಿ ಮತ್ತು ಡಿ ಭೂಮಿ ಮರು ಸರ್ವೆಗೆ ಆದೇಶ ಹೊರಡಿಸಿದ್ದರೂ ಈವರೆಗೆ ಸರ್ವೇಕ್ಷಣೆ ಪ್ರಾರಂಭ ಮಾಡದಿರುವುದರಿಂದ ರೈತರಿಗೆ ಆಗಿರುವ ತೊಂದರೆಯ ಬಗ್ಗೆ ಮಾನ್ಯ ಕಂದಾಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ —ಮಾನ್ಯ ಅಧ್ಯಕ್ಷರೇ, ೧೯೭೮ರಂದು ೧೮ ಲಕ್ಷ ಎಕರೆ ಭೂಮಿಯನ್ನು ಅಂದರೆ, ಸಿ ಮತ್ತು ಡಿ ಭೂಮಿಗಳೆಂದು ವರ್ಗೀಕೃತವಾದ ಭೂಮಿಯನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿತ್ತು. ಇದರ ಉದ್ದೇಶ ಅರಣ್ಯ ಇಲಾಖೆಯವರು ಇದರಲ್ಲಿ ಅರಣ್ಯವನ್ನು ಬೆಳೆಸಬೇಕೆಂಬ ಕಾರಣದಿಂದ ಈ ವರ್ಗಾವಣೆ ಮಾಡಲಾಗಿದೆ. ಈ ಉದ್ದೇಶದಿಂದ ಅರಣ್ಯ ಇಲಾಖೆಯವರು ಸುಮಾರು ೩.೨೫ ಲಕ್ಷ ಎಕರೆ ಜಾಗವನ್ನು ರಿಜರ್ವ್ ಫಾರೆಸ್ಟ್ ಎಂದು ಹೇಳಿದ್ದಾರೆ. ಉಳಿದ ೧೫ ಲಕ್ಷ ಎಕರೆ ಏನು ಇದೆ, ಅದರಲ್ಲಿ ಅರಣ್ಯವನ್ನು ಬೆಳೆಸಿಲ್ಲ. ಆದರೆ ಅಲ್ಲಿ ಅಫಾರಾಸ್ಟೇಷನ್ ಮಾಡಬೇಕೆಂದು ಅವರು ಹೇಳಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಾಗ